ವಿವರಣೆ ಕೊಡುತ್ತೀರಾ?' ಎಂದು ಕಳಕಳಿಯಿಂದ ಕೇಳಿದೆವು.

ನಮ್ಮ ಮುಖಚರ್ಯೆದಲ್ಲಾದ ಬದಲಾವಣೆ ಅವರಿಗೆ ಉತ್ತೇಜನ ತಂದು ಮಾತು ಮುಂದುವರೆಸಿದರು: 'ಇದು ತುಂಬಾ ಸಿಂಪಲ್ಲು ಮತ್ತು ಪ್ರಾಕ್ಟಿಕಲ್ ಕಾನ್ಸೆಪ್ಟು. ನಾನು ಹೇಳ್ತಾ ಹೋಗುತ್ತಿದ್ದಂತೆ, ನೀವು ಕಣ್ಮುಚ್ಚಿ ಊಹಿಸಿಕೊಳ್ಳಲು ಸನ್ನದ್ಧರಾಗಬೇಕು.

'ಯೆಸ್ ಸರ್' ಎಂದೆವು ಹುರುಪಿನಿಂದ.

'ಖಾಲಿ ಸೈಟನಲ್ಲಿ ಈಗ ಮನೆ ಎದ್ದು ನಿಂತಿದೆ. ಒಂದು ಪುಟ್ಟ ವರಾಂಡ ನಿಮಗೆ ಈಗ ಕಾಣಿಸುತ್ತಿದೆ. ಈ ಜಾಗ ಕೇವಲ ಚಪ್ಪಲಿ ಸ್ಟ್ಯಾಂಡು, ಯುಪಿಎಸ್ ಬ್ಯಾಟರಿ ಇಡುವುದಕ್ಕಷ್ಟೇ ಸೀಮಿತ. ಒಂದೆರಡು ಕುರ್ಚಿ ಹಾಕಲು ಅಲ್ಲಿ ಜಾಗವಿಲ್ಲ. ಈಗ ವರಾಂಡ ದಾಟಿ ಹಾಲಿಗೆ ಬಂದಿದ್ದೀರಿ. ಇಲ್ಲಿ ಟೀವಿ, ಸೋಫಾ ಸೆಟ್ಟು, ದಿವಾನು, ಟೀಪಾಯಿ ಇತ್ಯಾದಿ ವಸ್ತುಗಳ ನಿಖರ ಜಾಗ ಗುರುತು ಮಾಡಲಾಗಿರುತ್ತೆ. ಬದಲಾಯಿಸಲು ಸುತರಾಂ ಸಾಧ್ಯವಿಲ್ಲ. ಹಾಲಿನಲ್ಲಿ ವಿರುದ್ಧ ದಿಕ್ಕಿನಲ್ಲಿ ಎರಡು ಬಾಗಿಲುಗಳು ಕಾಣುತ್ತಿವೆ. ಇವು ನೀವು ಉಪಯೋಗಿಸುವ ಬೆಡ್‌ರೂಮುಗಳು. ಇಲ್ಲೂ ಮಂಚ, ವಾರ್ಡ್‌ರೋಬು, ಡ್ರೆಸ್ಸಿಂಗ್ ಟೇಬಲ್ಲುಗಳ ಜಾಗಗಳು ಪೂರ್ವ ನಿರ್ಧರಿತ. ಹ್ಞಾಂ. ಇನ್ನೊಂದು ವಿಶೇಷ ಗಮನಿಸಿದಿರಾ? ಈ ಮನೆಯಲ್ಲೆಲ್ಲೂ ಹೊಸ್ತಿಲೇ ಇರುವುದಿಲ್ಲ. ಇದಕ್ಕೊಂದು ಪ್ರಮುಖ ಕಾರಣವಿದೆ. ಯಾವುದೋ ಕಂಪನಿಯ ಚೇರ್ಮನ್ನೊ ಅಥವಾ ಚೇರ್ ಪರ್ಸನ್ನೊ ಆಗಿದ್ದ ನಿಮಗೆ ಗ್ರಹಚಾರ ವಕ್ಕರಿಸಿ ಈಗ ವ್ಹೀಲ್ ಚೇರಿಗೆ ವರ್ಗಾವಣೆ ಆದಾಗ ಬಾಗಿಲ ಹೊಸ್ತಿಲುಗಳು ಕೂಡುವ ಉಪಟಳ ಅಷ್ಟಿಷ್ಟಲ್ಲ. ಅರ್ಥವಾಯಿತೆ? ದಯವಿಟ್ಟು ವ್ಹೀಲ್ ಚೇರ್ನಿಂದ ಮೇಲಕ್ಕೆ ಏಳಿ. ಈಗ ಮುಖ್ಯಸ್ಥಳ, ಅಂದರೆ ಅಡುಗೆ ಕೋಣೆಗೆ ಬಂದಿದ್ದೀರಿ. ಸ್ವಲ್ಪ ಕಾಲದ ಹಿಂದೆ ಭಾರತೀಯ ನಾರೀಮಣಿಗಳು ತಮ್ಮ ಅಡುಗೆ ಮನೆಯನ್ನು ಇಟಾಲಿಯನ್ ಕಿಚನ್ನು ಎಂದು ಕರೆಸಿಕೊಳ್ಳಲು ಹೆಮ್ಮೆಪಡುತ್ತಿದ್ದರು. ಆದರೆ ಗೃಹಿಣಿಯರು ಈಗ ಸ್ವದೇಶಿ ಕಿಚನ್ನಿನ ಬಗ್ಗೆ ಹೆಚ್ಚು ಒಲವು ತೋರುತ್ತಿದ್ದಾರೆ. ಈ ವಿಚಾರದಲ್ಲಿ ನಮ್ಮದೇನು ಬಲವಂತವಿಲ್ಲ. ಅಂತಿಮ ಆಯ್ಕೆ ಈ ಪ್ರಜಾಪ್ರಭುತ್ವದಲ್ಲಿ ನಿಮ್ಮ ಗೃಹಿಣಿಯದ್ದೆ...' ಹಾಗೇ ಮುಂದುವರೆಸಿದರು.

'ಹ್ಞಾಂ, ಇಲ್ಲೊಂದು ಹೊಸ ಮಾಹಿತಿ ಹಂಚಿಕೊಳ್ಳಲೇಬೇಕು. ಬಲು ಸಮಯದಿಂದ ನಾಡಿನ ಗೃಹಿಣಿಯರಿಂದ ವಿನ್ಯಾಸಕಾರರಿಗೆ ದೂರೊಂದು ಬರುತ್ತಿತ್ತು. ಅಡುಗೆ ಕೋಣೆಯಿಂದ ಆಗಾಗ್ಗೆ ಹೊರಡುವ ಧರ್ಮಪತ್ನಿಯ 'ರ್‍ರೀ...' ಎಂಬ ಕೂಗಿಗೆ ಗಂಡಂದಿರ ರೆಸ್ಪಾನ್ಸೇ ಇಲ್ಲವೆಂಬ ಅಳಲು ನಿಜಕ್ಕೂ ದೊಡ್ಡ ದುರಂತವಾಗಿ ಪರಿಣಮಿಸಿತ್ತು. ಇದರ ನಿವಾರಣೆಗಾಗಿ ವಿನ್ಯಾಸಕಾರರು ಅಡುಗೆಕೋಣೆಯ ರೂಪುರೇಷೆ ಬದಲಿಸಿ ಅಕೌಸ್ಟಿಕ್ ಮೆಟೀರಿಯಲ್ಲಿನ ಗೋಡೆಗಳನ್ನು ನಿರ್ಮಿಸಿದ್ದಾರೆ. ಈಗ ರ್‍ರೀ... ಎಂಬ ಶಬ್ದ ಮೂರು ಸಲ ಪ್ರತಿಧ್ವನಿತವಾಗಿ, ಗಂಡನೆಂಬ ಅಲ್ಪಪ್ರಾಣಿ ಎಲ್ಲೇ ಮೂಲೆಯಲ್ಲಿ ಅಡಗಿ ಕುಳಿತಿದ್ದರೂ




ಕೇಳಿಸುವಂತೆ ವಿನ್ಯಾಸಗೊಳಿಸಲಾಗಿದೆ. ಇನ್ನು ನಿಮ್ಮ ಮುಖ್ಯ ಗಮನ – ಮನೆಯಲ್ಲಿರುವ ಟಾಯ್ಲೆಟ್‌ಗಳ ಮೇಲೆ. ನಾವು ಶೈಶವಾವಸ್ಥೆಯಿಂದ ಕೈಕಾಲು ಗಟ್ಟಿಯಾಗಿರುವವರೆಗೆ ಇಂಡಿಯನ್ ಆಗಿರುತ್ತೇವೆ (ಟಾಯ್ಲೆಟ್ ವಿಚಾರದಲ್ಲಿ). ನಂತರದ ದಿನಗಳಲ್ಲಿ ವೀಸಾ ಪಡೆದು ಪಾಶ್ಚಿಮಾತ್ಯರಾಗುತ್ತೇವೆ. ಇದನ್ನು ಗಮನದಲ್ಲಿಟ್ಟುಕೊಂಡು ಹೈಟ್ ಅಡ್ಜೆಸ್ಟಬಲ್ ವೆಸ್ಟರ್ನ್ ಕಮೋಡಿನ ವ್ಯವಸ್ಥೆ ಮಾಡಿದ್ದೇವೆ. ರೋಬಾಟಿಕ್ ತಂತ್ರಜ್ಞಾನ ಉಪಯೋಗಿಸಿ, ನಿಮ್ಮನ್ನು ಕಮೋಡಿನಿಂದ ಸರಾಗವಾಗಿ ಮೇಲೆತ್ತಲು ಈ ಆಟೊಮ್ಯಾಟಿಕ್ ರೋಬಾಟಿಕ್ ಆರ್ಮ್ಸ್‌ಗಳ ವ್ಯವಸ್ಥೆ ಕಲ್ಪಿಸಿದ್ದೇವೆ. ವಿವರಗಳು ಇನ್ನೂ ಪೂರ್ಣವಾಗಿಲ್ಲ... ಮುಂದುವರಿಸಲೇ?' ಎಂದು ಗಡಿಯಾರವನ್ನೊಮ್ಮೆ ನೋಡಿ, 'ಹ್ಯಾಗಿತ್ತು?' ಎಂದು ಪ್ರಶ್ನಿಸಿದರು.

'ಒಳ್ಳೆ ಸೌಂಡ್ ಅಂಡ್ ಲೈಟ್ ಷೋ ಇದ್ದಹಾಗಿತ್ತು ಸ್ವಾಮಿ, ನಮಗೆ ಈ ವಿಚಾರಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಕೊಂಚ ಸಮಯಾವಕಾಶ ಬೇಕು. ತಾವು ತಿಳಿದ ಹಾಗೆ ನಾವು ಬುದ್ಧಿಜೀವಿಗಳಲ್ಲ, ಬಡ್ಡಿ ಜೀವಿಗಳು ಎಂದು ಉತ್ತರಿಸಿ ಹೊರಡಲು ಎದ್ದೆವು.

ನಮ್ಮನ್ನು ಬೀಳ್ಕೊಡಲು ವರಾಂಡದವರೆಗೆ ಬಂದ ವಿನ್ಯಾಸಕಾರರು, ಮನೆಯ ಹೊಸ್ತಿಲು ಕಾಣದೆ ಎಡವಿ ದಢಾರನೆ ಕೆಳಗೆ ಬಿದ್ದ ಶಬ್ದ ಕೇಳಿಸಿತು. ಯಾವ ರೋಬಾಟಿಕ್ ಯಂತ್ರದ ಆರ್ಮ್‌ಗಳ ಸಹಾಯವಿಲ್ಲದೆ ನಾನು, ನನ್ನ ಮಡದಿ ಹ್ಯೂಮನ್ ಆರ್ಮಿನಿಂದ ಅವರನ್ನು ಅನಾಮತ್ತು ಎತ್ತಿ ನಿಲ್ಲಿಸಿ ಸಂಭಾಳಿಸಿದೆವು. ಹಿಂತಿರುಗುವಾಗ ಮಡದಿ, 'ರ್‍ರೀ... ಉಪದೇಶಕ್ಕೂ ಆಚರಣೆಗೂ ಅಜಗಜಾಂತರ ವ್ಯತ್ಯಾಸ ಅಲ್ವೇನ್ರೀ' ಎಂದಳು. ನನಗೂ ಅದು ದಿಟವೆನಿಸಿತು.

* * *

ಈಗ ಸ್ವಂತ ಮನೆಯಲ್ಲೇ ವಾಸಿಸುತ್ತಿರುವ ನಾನು ಒಂದು ಗುಟ್ಟನ್ನು ಹೊರ ಹಾಕಲಿಚ್ಛಿಸುತ್ತೇನೆ. ನಾನು ಈ ಮನೆಯನ್ನು ವಾಸ್ತು ಪ್ರಕಾರವಾಗಿ ಕಟ್ಟಲಿಲ್ಲ, ವಸ್ತು ಪ್ರಕಾರವಾಗಿಯೂ ಕಟ್ಟಲಿಲ್ಲ. ಬದಲಿಗೆ ಎಲ್ಲೂ ಸಾಲ ಮಾಡದೆ ನಮ್ಮ ಬಳಿಯಿದ್ದ 'ಮನಿ' ಪ್ರಕಾರ ಮನೆ ಕಟ್ಟಿ ಗೃಹಪ್ರವೇಶ ಮಾಡಿದೆವು. ಗೃಹ ಪ್ರವೇಶಕ್ಕೆ ಕನ್ನಡ ಮತ್ತು ಇಂಗ್ಲಿಷ್ ಆಹ್ವಾನ ಪತ್ರಿಕೆಯನ್ನು ಪ್ರಿಂಟ್ ಮಾಡಿದ ಆ ಅನುಭವಿ ಮಗ ಇಂಗ್ಲಿಷ್ ಕಾರ್ಡಿನಲ್ಲಿ 'ಹೌಸ್ ವಾರ್ಮಿಂಗ್' ಸೆರಮನಿ ಎಂಬುದರ ಬದಲು 'ಹೌಸ್ ವಾರ್ನಿಂಗ್' ಸೆರಮನಿ ಎಂದು ಅಚ್ಚೊತ್ತಿದ್ದ. ಗಾಬರಿಯಾದರೂ ತಿದ್ದುಪಡಿ ಮಾಡಲು ಯಾಕೊ ನಾವು ಇಷ್ಟಪಡಲೇ ಇಲ್ಲ!

ಪ್ರತಿಕ್ರಿಯಿಸಿ: feedback@sudha.co.in